





ಜೀವನ್ ಶೆಟ್ಟಿ

# ಜಲ್ ಸಂಝಿ

## ನೀರ ಮೇಲಿನ ಬಣ್ಣದ ಬಿಂಬಗಳು





'ಜಲ್ ಸಂಝಿ' ಅಥವಾ 'ಜಲ್ ಸಾಂಝಿ' ಎನ್ನುವುದು ನೀರಿನ ಮೇಲೆ ಬಣ್ಣದ ಹುಡಿಗಳನ್ನು ಉದುರಿಸುತ್ತಾ ಚಿತ್ರ ಬಿಡಿಸುವ ಕಲೆ. ಮುಖ್ಯವಾಗಿ, ಶ್ರೀಕೃಷ್ಣನ ವಿವಿಧ ಲೀಲೆಗಳ ಚಿತ್ರಗಳನ್ನು ರಚಿಸುವ ಕಲೆಯಿದು.

'ಜಲ್ ಸಂಝಿ' ಕಲಾವಿದ, ದೊಡ್ಡ ಹರಿವಾಣದಂತಹ ಪಾತ್ರೆಯಲ್ಲಿ ನೀರು ತುಂಬಿ, ನೀರಿನ ಮೇಲೆ ಬಣ್ಣಗಳ ಹುಡಿಗಳನ್ನು ರಂಗೋಲಿ ಹುಡಿಯಂತೆ ಚಿಮುಕಿಸುತ್ತಾನೆ. ಹೀಗೆ ಬಣ್ಣದ ಹುಡಿ ಚಿಮುಕಿಸಿ ನೀರಿನ ಮೇಲೆ ಚಿತ್ರ ಮೂಡಿಸಲು ತುಂಬಾ ಜಾಣ್ಮೆ ಮತ್ತು ತಾಳ್ಮೆ ಅಗತ್ಯ. ಒಮ್ಮೆ ಚಿತ್ರ ಹಾಳಾದರೆ ಅಳಿಸಿ ಬರೆಯುವ ಹಾಗಿಲ್ಲ. ತುಸು ಯಡವಟ್ಟಾದರೂ, ಮತ್ತೆ ಹೊಸದಾಗಿ ಚಿತ್ರ ಬಿಡಿಸಬೇಕಾಗುತ್ತದೆ.

'ಜಲ್ ಸಂಝಿ' ಕಲೆ ಶ್ರೀಕೃಷ್ಣನ ಯುಗದಲ್ಲಿ ಗೋಕುಲ ಮತ್ತು ಮಥುರಾಗಳಲ್ಲಿ ಬಳಕೆಯಲ್ಲಿತ್ತಂತೆ. ಕಾಲಕ್ರಮೇಣ ಈ ವಿಶಿಷ್ಟ ಕಲೆ ತೆರೆಮರೆಗೆ ಸರಿಯತೊಡಗಿತು. ಇತ್ತೀಚಿನ ವರ್ಷಗಳಲ್ಲಿ 'ಜಲ್ ಸಂಝಿ' ಕಲೆಯನ್ನು ಮತ್ತೆ ಮುನ್ನೆಲೆಗೆ ತರುವ ಪ್ರಯತ್ನಗಳು ಕೆಲವೆಡೆ ನಡೆಯುತ್ತಿವೆ. ರಾಜಸ್ತಾನದಲ್ಲಿ ಪ್ರತಿ ವರ್ಷ 'ಜಲ್ ಸಂಝಿ ಕಲಾ ಉತ್ಸವ' ನಡೆಯುತ್ತದೆ. ಈ ಕಲೆಯ ಬಗ್ಗೆ ತಿಳಿದುಕೊಳ್ಳಲು ವಿದೇಶದಿಂದಲೂ ಚಿತ್ರಕಲಾ ಆಸಕ್ತರು ಉತ್ಸವಕ್ಕೆ ಬರುವುದಿದೆ.

ರಾಜಸ್ತಾನದ ಉದಯಪುರದ 'ವೈಷ್ಣವ್ ಕುಟುಂಬ'ದ ಕಲಾವಿದರು 'ಜಲ್ ಸಂಝಿ' ಕಲೆಯನ್ನು ಜೋಪಾನವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಆ ಕುಟುಂಬದ ಹೊಸ ಪೀಳಿಗೆಯ ಕಲಾವಿದ ರಾಜೇಶ್ ವೈಷ್ಣವ್ 'ಜಲ್ ಸಂಝಿ' ಕಲೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಕಲೆ ಅವರಿಗೆ ತಂದೆ ಶ್ರೀಮನ್ನಾ ಲಾಲ್‌ಜಿ ಅವರಿಂದ ದೊರೆತ ಬಳುವಳಿ. 'ಜಲ್ ಸಂಝಿ' ಕಲೆಯಲ್ಲಿ ಪ್ರಾವೀಣ್ಯ ಗಳಿಸಿದ್ದ ಲಾಲ್‌ಜಿ ಅವರು, ಭಾರತೀಯ ಸಂಸ್ಕೃತಿ ಸಚಿವಾಲಯದ ಗೌರವಕ್ಕೆ ಪಾತ್ರರಾಗಿದ್ದರು.

ಪ್ರತಿಕ್ರಿಯಿಸಿ: feedback@sudha.co.in